# ತಮಿಳುನಾಡಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ

**ಇತಿಹಾಸ**

ಪ್ರಾಚೀನ ಕಾಲದಲ್ಲಿ ತಮಿಳುನಾಡು ಪ್ರಾಂತದಲ್ಲಿ ಗ್ರಾಮ ಸಂಘಗಳು ಸಬಾಯ್ ಹೆಸರಿನಲ್ಲಿ ಇದ್ದುದು ಮತ್ತು ಗ್ರಾಮ ಸಂಘಗಳು ಅನೇಕ ವಾರ್ಡ್‌ಗಳು ಮಂಡಲಂ ಹೆಸರಿನಲ್ಲಿ ಇದ್ದುದು ಉತಿರ್ ಮೆರೂರ್ ಬಳಿಯಲ್ಲಿನ ವೈಕುಂಠ ಪೆರುಮಾಳ್ ಮಂದಿರದ ಬಳಿ ಸಿಕ್ಕಿರುವ ಶಿಲಾಶಾಸನಗಳ ಮೂಲಕ ತಿಳಿದುಬರುತ್ತದೆ. ಆಗ, ಮಣ್ಣಿನ ದೊಡ್ಡ ಪಾತೆಯಲ್ಲಿ ಚೀಟಿಗಳನ್ನು ಹಾಕಿ, ಅವುಗಳನ್ನು ತೆರೆಯುವ ಮೂಲಕ ಸದಸ್ಯರು ಕುಡವೋಳೈ ಮುರೈ ಪದ್ಧತಿಯಲ್ಲಿ ಆಯ್ಕೆ ಆಗುತ್ತಿದ್ದರು.

ಬ್ರಿಟಿಷ್ ಆಡಳಿತ ಜಾಗಿಗೊಂಡಾಗ, ಅಧಿಕಾರವು ಕೇಂದ್ರೀ ಕರಣಗೊಂಡು ಪಂಚಾಯತ್‌ಗಳು ನಿಷ್ಕ್ರಿಯವಾದವು. ಗ್ರಾಮಗಳಲ್ಲೇ ದೊರಕುತ್ತಿದ್ದ ಸೌಲಭ್ಯಗಳನ್ನು ಪಡೆಯಲು ಆಗ ಜಿಲ್ಲಾ ಕೇಂದ್ರದವರೆಗೆ ಹೋಗುವುದು ಅನಿವಾರ್ಯವಾಯಿತು. ಇದರಲ್ಲಿನ ದೋಷಗಳು ಸ್ವತ: ಬ್ರಿಟಿಷ್ ಆಡಳಿತಕ್ಕೇ ತಿಳಿಯಿತು. ಆಗ, ಜನರಿಗೆ ಮುಖ್ಯವಾಗಿ ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ ಮತ್ತು ಬೀದಿ ದೀಪ ಸೌಲಭ್ಯ ಪೂರೈಕೆ ವಿಷಯಗಳಲ್ಲಿ ತೊಂದರೆ ಆಗಿತ್ತು. ಇದನ್ನು ಗಮನಿಸಿ, ಲಾರ್ಡ್ ರಿಪನ್ ಕಾಲದಲ್ಲಿ ಪಟ್ಟಣಗಳು–ಗ್ರಾಮಗಳನ್ನು ಒಗ್ಗೂಡಿಸಿ ಒಂದು ಆಡಳಿತ ಕೇಂದ್ರವನ್ನು ರಚಿಸಲಾಯಿತು. ಚುನಾವಣೆಗಳೂ ನಡೆಯುವ ಏರ್ಪಾಟು ಮಾಡಲಾಯಿತು. ಚುನಾಯಿತ ಸದಸ್ಯರು ಬ್ರಿಟಿಷ್ ಆಡಳಿತ ನೇಮಿಸಿದ ಇನಸ್ಪೆಕ್ಟರ್ ಮತ್ತು ಅಧ್ಯಕ್ಷರ ಆದೇಶಗಳನ್ನು ಪಾಲಿಸಬೇಕಿತ್ತು. ಮುಂದಿನ ಕಾಲದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮುನ್ಸಿಪಾಲಿಟಿ ಎಂಬ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದು, ಅಂದಿನ ಬೃಹತ್ ನಗರವೆನಿಸಿದ್ದ ಮದರಾಸ್ ನಗರ ಮುನ್ಸಿಪಲ್ ಕಾರ್ಪೊರೇಷನ್ ಸ್ಥಾನ ಗಳಿಸಿತು. 1916ರಿಂದ ಮದರಾಸಿನಲ್ಲಿ ಸ್ಥಳೀಯ ಮತ್ತು ಮುನ್ಸಿಪಲ್ ಇಲಾಖೆ (ಇದರಲ್ಲಿ ಸ್ಥಳೀಯ, ಮುನ್ಸಿಪಲ್, ಪ್ಲೇಗ್, ಮೆಡಿಕಲ್ ಮತ್ತು ಶಾಸನಾತ್ಮಕ ಎಂಬ ವಿಭಾಗಗಳು ಇದ್ದವು) ಕಾರ್ಯ ನಿರ್ವಹಿಸಲಾರಂಭಿಸಿತು.

ಕಾಂಗ್ರೆಸ್ ಒಂದು ಕಡೆ ಸ್ವಾತಂತ್ರ್ಯ ಆಂದೋಲನ ನಡೆಸುತ್ತಿದ್ದು, ಇದರ ಭಾಗವಾಗಿ, ಮಹಾತ್ಮಾ ಗಾಂಧೀಜಿ ಕರೆಯಂತೆ, ಮೇಲಿಂದ ಮೇಲೆ ಸ್ಥಳೀಯ ಆಡಳಿತ ಜಾರಿಗೊಳ್ಳಬೇಕೆಂದು ಹಕ್ಕೊತ್ತಾಯವನ್ನು ದೇಶಾದ್ಯಂತ ಮಂಡಿಸುತ್ತಿತ್ತು. ಗ್ರಾಮಗಳು ಆಡಳಿತ ಕೇಂದ್ರಗಳಾಗಬೇಕು ಎಂಬುದು ಈ ಹಕ್ಕೊತ್ತಾಯದ ಮುಖ್ಯ ಆಶಯವಾಗಿತ್ತು.

1950ರಲ್ಲಿ ಸ್ವತಂತ್ರ ಭಾರತದ ಸಂವಿಧಾನ ಜಾರಿ ಗೊಂಡಿತು. ಅದರಲ್ಲಿ ಭಾಗ–4ರಲ್ಲಿ 'ರಾಜ್ಯ ನೀತಿ ನಿರ್ದೇಶಕ ತತ್ವಗಳು' ಅಡಿಯಲ್ಲಿ ಅನುಚ್ಛೇದ 40ರಲ್ಲಿ 'ಗ್ರಾಮ ಪಂಚಾಯತಿಗಳನ್ನು ಸಂಘಟಿಸಲು ಸರ್ಕಾರ ಕ್ರಮ ಕೈಗೊಳ್ಳತಕ್ಕದ್ದು. ಈ ಪಂಚಾಯತ್‌ಗಳು ಸ್ವತಂತ್ರ ಆಡಳಿತ ಘಟಕಗಳಾಗಿ ಕಾರ್ಯ ನಿರ್ವಹಿಸುವುದಕ್ಕೆ ಅವುಗಳಿಗೆ ಅಗತ್ಯ ವಾದ ಅಧಿಕಾರವನ್ನು ಮತ್ತು ಬೆಂಬಲವನ್ನು ಸರ್ಕಾರ ನೀಡಬೇಕು' ಎಂದು ಹೇಳಲಾಗಿದೆ.

ಈ ಅಂಶವನ್ನು ಈಡೇರಿಸುವ ನಿಟ್ಟಿನಲ್ಲಿ ತಮಿಳುನಾಡು ಸರ್ಕಾರ ಮದರಾಸ್ ಗ್ರಾಮ ಪಂಚಾಯತ್ ಕಾಯ್ದೆಯನ್ನು 1950ರಲ್ಲೇ ಪಾಸ್ ಮಾಡಿ, ಜಾರಿಗೊಳಿಸಿತು. ಅದೇ ವರ್ಷ ತಮಿಳುನಾಡು ಜಿಲ್ಲಾ ಮುನ್ಸಿಪಾಲಿಟಿ (ತಿದ್ದುಪಡಿ) ಕಾಯ್ದೆಯನ್ನು ಜಾರಿ ಮಾಡಲಾಯಿತು.

ಈ ವಿಷಯವನ್ನು ಎತ್ತಿ ಹೇಳಿ, ಅನೇಕ ಸಂಸತ್ ಸದಸ್ಯರು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದಾಗ, 'ಬಲವಂತರಾಯ್ ಮೆಹತಾ ಕಮಿಟಿ'ಯನ್ನು ರಚಿಸಲಾಯಿತು. ಅದು ದೇಶದಲ್ಲಿ ಮೂರು ಹಂತಗಳಲ್ಲಿ ಪಂಚಾಯತ್‌ಗಳನ್ನು ಸಂಘಟಿಸುವುದು ಅತ್ಯವಶ್ಯ ಎಂದು ವರದಿ ನೀಡಿತು. ಮುಂದೆ 1958ರಲ್ಲಿ ತಮಿಳುನಾಡು ಪಂಚಾಯತ್ ಕಾಯ್ದೆ ಪಾಸ್ ಮಾಡಲಾಯಿತು. ಅದೇ ವರ್ಷ ತಮಿಳುನಾಡು ಜಿಲ್ಲಾ ಅಭಿವೃದ್ಧಿ ಮಂಡಳಿ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಸಂವಿಧಾನಕ್ಕೆ ತರಲಾದ 73ನೇ ಮತ್ತು 74ನೇ ತಿದ್ದುಪಡಿ ಬಳಿಕ ತಮಿಳು ನಾಡಿನಲ್ಲಿ 1994ರಿಂದ ತಮಿಳುನಾಡು ಪಂಚಾಯತ್ ಕಾಯ್ದೆ 1994ನ್ನು ಜಾರಿ ಮಾಡಲಾಯಿತು.

ಅಧಿಕಾರವು ವಿಕೇಂದ್ರೀಕರಣಗೊಂಡರೆ, ಅರ್ಥ ಪೂರ್ಣ ಅಭಿವೃದ್ಧಿಯನ್ನು ಸಾಧಿಸಲು ಅನುಕೂಲ ಎಂಬ ಮಾತನ್ನು ಅಲ್ಲಗಳೆಯಲು ಆಗುವುದಿಲ್ಲ. ಇದಕ್ಕಾಗಿ ನಗರ ಮತ್ತು ಗ್ರಾಮ ಮಟ್ಟದಲ್ಲಿ ಸ್ಥಳೀಯ ಸರ್ಕಾರ ದೊರಕುವುದು ಅತ್ಯಗತ್ಯ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕೈಗೊಳ್ಳುವ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಪರಿಣಾಮ ಕಾರಿ ತಳಮಟ್ಟದಲ್ಲಿ ಜಾರಿಗೊಳಿಸುವ ಕಾರ್ಯದಲ್ಲಿ ಪಂಚಾಯತ್‌ಗಳ ಪಾತ್ರ ಅತಿ ಮುಖ್ಯವಾದುದು.

ಪಂಚಾಯತ್ ರಾಜ್ ಕಾಯ್ದೆ ರಚಿಸುವುದಕ್ಕೆ ಸಂಬಂಧಿಸಿ

**ಮಂಗ್ಳೂರ ವಿಜಯ**

ಸಂವಿಧಾನಕ್ಕೆ ತರಲಾದ 73ನೇ ತಿದ್ದುಪಡಿ ಬಳಿಕ, ಅನುಚ್ಛೇದ 243 ಮತ್ತು 243(ಒ)ಗಳ ಆಶಯಕ್ಕೆ ಅನುಗುಣವಾಗಿ ಸಂವಿಧಾನಕ್ಕೆ 'ಪಂಚಾಯತಿಗಳು' ಎಂಬ 9ನೇ ಹೊಸ ಭಾಗವನ್ನು ಸೇರಿಸಲಾಯಿತು. ನಂತರ, 11ನೇ ಪರಿಶಿಷ್ಟ (ಷಡ್ಯೂಲ್) ಲಗತ್ತಿಸಿ, ಅದರಲ್ಲಿ ಪಂಚಾಯತಿಗಳಿಗೆ ಒಳಪಡುವ ಒಟ್ಟು 29 ವಿಷಯಗಳನ್ನು ನಮೂದಿಸ ಲಾಯಿತು.

ಪಂಚಾಯತ್ ರಾಜ್ ಕಾಯ್ದೆಯು, ಪಂಚಾಯತಿಗಳಿಗೆ ಪ್ರತಿ ಐದು ವರ್ಷಕ್ಕೊಮ್ಮೆ ತಪ್ಪದೆ ಚುನಾವಣೆ ನಡೆಯತಕ್ಕದ್ದು ಎಂದು ನಿರ್ದೇಶಿಸುತ್ತದೆ. ಅಲ್ಲದೆ, ಒಮ್ಮೆ ಚುನಾಯಿತಗೊಂಡ ಪಂಚಾಯತಿಯ 5 ವರ್ಷದ ಅವಧಿ ಮುಗಿಯುವ ಮುನ್ನವೇ ಚುನಾವಣೆಗಳು ನಡೆದು, ಹೊಸ ಪಂಚಾಯತಿಯು ಸರಿಯಾದ ಕಾಲಕ್ಕೆ ಅಧಿಕಾರ ಪಡೆದು ಕೊಳ್ಳಬೇಕು ಎಂದು ಹೇಳುತ್ತದೆ.

ತಮಿಳುನಾಡಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳೆಂದರೆ ಸಿಟಿ ಮುನ್ಸಿಪಲ್ ಕಾರ್ಪೊರೇಷನ್‌ಗಳು, ಮುನ್ಸಿಪಾಲಿಟಿಗಳು ಮತ್ತು ಪಟ್ಟಣ ಪಂಚಾಯತಿಗಳು ಇದ್ದು, ಇವುಗಳನ್ನು ಜನಸಂಖ್ಯೆ ಮತ್ತು ಆದಾಯದ ಆಧಾರದಲ್ಲಿ ವಿಂಗಡಿಸಲಾಗಿದೆ.

ಒಟ್ಟು 15 ಸಿಟಿ ಮುನ್ಸಿಪಲ್ ಕಾರ್ಪೊರೇಷನ್‌ಗಳು (ಚೆನ್ನೈ, ಕೊಯಂಬತ್ತೂರ್, ಮದುರೈ, ತಿರುಚಿರಾಪಲ್ಲಿ, ತಿರುಪ್ಪೂರ್, ಸೇಲಮ್, ಇರೋಡ್, ತಿರುನಲ್ವೇಲಿ, ವೆಲ್ಲೂರ್, ತೂತುಕುಡಿ, ದಿಂಡಿಗುಲ್, ತಂಜಾವೂರ್, ಹೊಸೂರ್, ನಾಗರ್‌ಕೊಯ್ಲ್ ಮತ್ತು ಆವಡಿ) ಇದ್ದು, ಇಲ್ಲೇ ಇಡೀ ರಾಜ್ಯದ 1/3 ಜನಸಂಖ್ಯೆ ಇದೆ.

ಒಟ್ಟು 152 ಮುನ್ಸಿಪಾಲಿಟಿಗಳು ಇವೆ. ಇವುಗಳನ್ನು ಜನಸಂಖ್ಯೆ ಮತ್ತು ಆದಾಯದ ಆಧಾರದಲ್ಲಿ ನಾಲ್ಕು ವಿಧಗಳಲ್ಲಿ ವಿಭಾಜಿಸಲಾಗಿದೆ. (1) 16 ವಿಶೇಷ ದರ್ಜೆಯ ಮುನ್ಸಿಪಾಲಿಟಿಗಳು (2) 31 ಸೆಲೆಕ್ಷನ್ ಗ್ರೇಡ್ ಮುನ್ಸಿಪಾಲಿಟಿಗಳು (3) 33 ಗ್ರೇಡ್–1 ಮುನ್ಸಿಪಾಲಿಟಿಗಳು

(4) 44 ಗ್ರೇಡ್–2 ಮುನ್ಸಿಪಾಲಿಟಿಗಳು. ಹಾಗೆಯೆ, ರಾಜ್ಯದಲ್ಲಿ ಒಟ್ಟು 561 ಪಟ್ಟಣ ಪಂಚಾಯತಿಗಳು ಇವೆ.

ತಮಿಳುನಾಡಿನಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಾದ ಪಂಚಾಯತಿಗಳಲ್ಲಿ (1) ಗ್ರಾಮ ಪಂಚಾಯತಿಗಳು (2) ಬ್ಲಾಕ್ ಪಂಚಾಯತಿಗಳು ಮತ್ತು (3) ಜಿಲ್ಲಾ ಪಂಚಾಯತಿಗಳು ಎಂಬ ಮೂರು ವಿಧಗಳಿವೆ.

ಗ್ರಾಮ ಪಂಚಾಯತಿಗಳು ತಳಮಟ್ಟದ ಸರ್ಕಾರಗಳು. ರಾಜ್ಯದಲ್ಲಿ ಒಟ್ಟು 12,524 ಗ್ರಾಮ ಪಂಚಾಯತಿಗಳು, 388 ಬ್ಲಾಕ್ ಪಂಚಾಯತಿಗಳು ಮತ್ತು 31 ಜಿಲ್ಲಾ ಪಂಚಾಯತಿಗಳು ಇವೆ.

ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ರಾಜ್ಯ ಚುನಾವಣಾ ಆಯೋಗ ನಡೆಸುತ್ತದೆ. ನಗರ ಸ್ಥಳೀಯ ಸಂಸ್ಥೆಗಳಾದ ಕಾರ್ಪೊರೇಷನ್ ಮುಖ್ಯಸ್ಥ ಮೇಯರ್ ಸ್ಥಾನಕ್ಕೆ, ಮುನ್ಸಿಪಾಲಿಟಿ/ಪಟ್ಟಣ ಪಂಚಾಯತಿಗಳ ಮುಖ್ಯಸ್ಥ ಅಧ್ಯಕ್ಷ ಸ್ಥಾನಕ್ಕೆ ಮತ್ತು ಕಾರ್ಪೊರೇಷನ್/ಮುನ್ಸಿಪಾಲಿಟಿ/ಪಟ್ಟಣ ಪಂಚಾಯತ್ ಸದಸ್ಯ ಸ್ಥಾನಕ್ಕೆ ನೇರ ಚುನಾವಣೆ ನಡೆಯುತ್ತದೆ. ಹಾಗೆಯೆ, ಗ್ರಾಮೀಣ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ, ಜಿಲ್ಲಾ ಪಂಚಾಯತ್ ಸದಸ್ಯ ಸ್ಥಾನಕ್ಕೆ, ಬ್ಲಾಕ್ ಪಂಚಾಯತ್ ಸದಸ್ಯ ಸ್ಥಾನಕ್ಕೆ ಮತ್ತು ಗ್ರಾಮ ಪಮಚಾಯತ್ ವಾರ್ಡ್ ಸದಸ್ಯ ಸ್ಥಾನಕ್ಕೆ ಕೂಡ ನೇರ ಚುನಾವಣೆ ನಡೆಯುತ್ತದೆ. ನೇರ ಚುನಾವಣೆಯಲ್ಲಿ ಮತದಾರರು ಮತ ನೀಡುತ್ತಾರೆ.

ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ, ಬ್ಲಾಕ್ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ, ಕಾರ್ಪೊರೇಷನ್ ಉಪ ಮೇಯರ್ ಸ್ಥಾನಕ್ಕೆ, ಮುನ್ಸಿಪಾಲಿಟಿಗಳ/ಪಟ್ಟಣ ಪಂಚಾಯತಿಗಳ ಉಪಾಧ್ಯಕ್ಷ ಸ್ಥಾನಕ್ಕೆ ಮತ್ತು ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಪರೋಕ್ಷ ಚುನಾವಣೆ ನಡೆಯುತ್ತದೆ. ಪರೋಕ್ಷ ಚುನಾವಣೆಯಲ್ಲಿ ಆಯಾ ಹಂತದ ಸದಸ್ಯರುಗಳು ಮತ ನೀಡುತ್ತಾರೆ.

ರಾಜ್ಯ ಸರ್ಕಾರವು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕವೇ ನಡೆಸುತ್ತದೆ. ಸ್ವಚ್ಛ ಪರಿಸರ, ಪ್ರಾಥಮಿಕ ಆರೋಗ್ಯ ಸೌಲಭ್ಯಗಳ ಪೂರೈಕೆ, ನೀರು ಪೂರೈಕೆ, ರಸ್ತೆಗಳು ಮತ್ತು ಕಟ್ಟಡಗಳು, ಒಳಚರಂಡಿ ವ್ಯವಸ್ಥೆ, ಬೀದಿ ದೀಪ ನಿರ್ವಹಣೆ, ಘನ ತ್ಯಾಜ್ಯ ನಿರ್ವಹಣೆ, ಸ್ವಚ್ಛತೆ, ಸಂತೆಗಳು, ಬಸ್ ನಿಲ್ದಾಣಗಳು, ವಾಣಿಜ್ಯ ಮಳಿಗೆಗಳು ಇತ್ಯಾದಿಗಳನ್ನು ನಿರ್ವಹಿಸುವುದು ಸ್ಥಳೀಯ ಸಂಸ್ಥೆಗಳ ಹೊಣೆ. ಹಾಗೆಯೆ, ಕೇಂದ್ರ ಸರ್ಕಾರ ಪುರಸ್ಕೃತ ಮಹಾತ್ಮಾ ಗಾಂಧೀ ಉದ್ಯೋಗ ಖಾತ್ರಿ ಯೋಜನೆ, ಇಂದಿರಾ ಆವಾಸ್ ಯೋಜನೆ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ಮತ್ತು ರಾಜ್ಯ ಸರ್ಕಾರದ ಗ್ರಾಮ ವಸತಿ ಪ್ರದೇಶ ಅಭಿವೃದ್ಧಿ ಯೋಜನೆ, ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ, ಸೋಲಾರ್ ನೆರವಿನ ಹಸಿರುಗೃಹ ಯೋಜನೆ ಇತ್ಯಾದಿಗಳನ್ನು ನಿರ್ವಹಣೆ ಮಾಡುವುದು ಕೂಡ ಸ್ಥಳೀಯ ಸಂಸ್ಥೆಗಳ ಹೊಣೆ.

ತಮಿಳುನಾಡಿನಲ್ಲಿರುವ ಒಟ್ಟು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಪಟ್ಟಿ ಕೆಳಗಿನಂತಿದೆ.

ರಾಜ್ಯ ಚುನಾವಣಾ ಆಯೋಗದ ಮೇಲುಸ್ತುವಾರಿ ಯಲ್ಲಿ 2001, 2006 ಮತ್ತು 2011ರಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ಯಶಸ್ವಿಯಾಗಿ ನಡೆದಿವೆ. ಮುಂದಿನ ಚುನಾವಣೆ 2016ರಲ್ಲಿ ನಡೆಯಬೇಕಿತ್ತು. ಆದರೆ, ಕೆಲವು ತಿಂಗಳುಗಳ ಮುಂಚೆ ಅಂದರೆ ಜುಲೈ 2016ರಲ್ಲಿ ಅಂದಿನ ಮುಖ್ಯಮಂತ್ರಿ ಜಯಲಲಿತಾ ಕೈಗೊಂಡ ಕೆಲವೊಂದು ನಿರ್ಣಯಗಳನ್ನು ಅಳವಡಿಸುವ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರಲಿರುವುದಾಗಿ, ಆದ್ದರಿಂದ ಚುನಾವಣೆಯನ್ನು ಅನಿರ್ದಿಷ್ಟ ಕಾಲಕ್ಕೆ ಮುಂದೂಡಬೇಕಾಗಿ ಆಡಳಿತಾರೂಢ ಅಣ್ಣಾ ಡಿಎಂಕೆ ಪಕ್ಷದ ಮುಖ್ಯಮಂತ್ರಿ ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿತ್ತು. ಆದರೆ, ಈ ನಿಟ್ಟಿನಲ್ಲಿ ಸರ್ಕಾರ ಏನೂ ಕ್ರಮ ಕೈಗೊಂಡಿರಲಿಲ್ಲ.

ಇದನ್ನು ಗಮನಿಸಿದ ಆಯೋಗವು, ಆಯೋಗವು 26 ಸೆಪ್ಟೆಂಬರ್ 2016ರಂದು ಹೇಳಿಕೆ ನೀಡಿ, ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆ ಅಕ್ಟೋಬರ್ 17 ಮತ್ತು 19ರಂದು ನಡೆಯುವುದಾಗಿ ಘೋಷಿಸಿತು. ಆದರೆ, 28 ಸೆಪ್ಟೆಂಬರ್ 2016ರಂದು ರಾಜ್ಯದ ಪ್ರಮುಖ ವಿರೋಧ ಪಕ್ಷವಾದ ಡಿಎಂಕೆ, 'ಈಗ ಘೋಷಿಸಲಾಗಿರುವ ಪಟ್ಟಿಯ ಪ್ರಕಾರ, ಪ.ಜಾತಿ ಮತ್ತು ಪ.ಪಂಗಡಗಳಿಗೆ ಸಂವಿಧಾನದ ನಿರ್ದೇಶನ ರೀತ್ಯಾ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ಅದನ್ನು ಸರಿಪಡಿಸಿದ ಬಳಿಕವೇ, ಚುನಾವಣೆ ನಡೆಸಬೇಕು' ಎಂದು ಮದರಾಸ್ ಹೈಕೋರ್ಟ್‌ಗೆ ಮನವಿ ಸಲ್ಲಿಸಿತು. ಅಕ್ಟೋಬರ್ 4ರಂದು ಹೈಕೋರ್ಟಿನ ಏಕಸದಸ್ಯ ಪೀಠವು, ಚುನಾವಣಾ ಆಯೋಗದ ಪ್ರಕಟಣೆಯನ್ನು ತಡೆಹಿಡಿಯಿತು. ಇದನ್ನು ಪ್ರಶ್ನಿಸಿ, ಆಯೋಗವು ಮರು ಮನವಿ ಸಲ್ಲಿಸಿದಾಗ, ಪೀಠವು ಅಕ್ಟೋಬರ್ 7ರಂದು 'ಆಯೋಗವು ಮರು ಪ್ರಕಟಣೆ ನೀಡಲಿ' ಎಂದು ಆದೇಶ ನೀಡಿ, ಮೊದಲಿನ ದಿನಾಂಕವನ್ನು ರದ್ದುಗೊಳಿಸಿ, ಅದೇ ವರ್ಷದ ಡಿಸೆಂಬರ್ 31ರೊಳಗೆ ಚುನಾವಣಾ ದಿನಾಂಕ ಘೋಷಿಸಲು ಆದೇಶಿಸಿತು.

ಆದರೆ, ಆಯೋಗ ಚುನಾವಣೆ ನಡೆಸಲಿಲ್ಲ. ಇದನ್ನು ಪ್ರಶ್ನಿಸಿ

| | ಸಂಸ್ಥೆಗಳ ಸಂಖ್ಯೆ | ವಾರ್ಡ್‌ಗಳ ಸಂಖ್ಯೆ |
|---|---|---|
| ಗ್ರಾಮ ಪಂಚಾಯತಿಗಳು | 12,524 | 99,324 |
| ಬ್ಲಾಕ್ ಪಂಚಾಯತಿಗಳು | 388 | 6,471 |
| ಜಿಲ್ಲಾ ಪಂಚಾಯತಿಗಳು | 31 | 655 |
| ಒಟ್ಟು | 12,943 | 1,06,450 |

ಡಿಎಂಕೆ, 18 ಫೆಬ್ರುವರಿ 2017ರಂದು ಮದರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ, ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕಕೆ ನಿರ್ದೇಶನ ನೀಡಬೇಕು' ಎಂದು ಮನವಿ ಮಾಡಿ ಕೊಂಡಿತು. ಈ ಅರ್ಜಿ ವಿಚಾರಣೆ ಸಂಬಂಧದಲ್ಲಿ 21 ಫೆಬ್ರುವರಿ 2017ರಂದು ಹಾಜರಾದ ಆಯೋಗದ ಪ್ರತಿನಿಧಿ 'ಮೇ ಮಧ್ಯಭಾಗದಲ್ಲಿ ಚುನಾವಣೆ ನಡೆಸಲಾಗುವುದು' ಎಂದು ತಿಳಿಸಿದರು. ಆದರೆ, ಈ ನಿಟ್ಟಿನಲ್ಲಿ ಆಯೋಗವು ಯಾವುದೇ ಸಿದ್ಧತೆಗಳನ್ನು ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸದೇ ಇರುವುದನ್ನು ಏಪ್ರಿಲ್ ಮೊದಲ ವಾರದಲ್ಲಿ ಗಮನಿಸಿದ ಹೈಕೋರ್ಟು 'ಮೇ 14ರೊಳಗೆ ಚುನಾವಣೆ ನಡೆಸತಕ್ಕದ್ದು' ಎಂದು ಏಪ್ರಿಲ್ 4ರಂದು ಆದೇಶ ಮಾಡಿತು.

ಆಯೋಗ ಚುನಾವಣೆ ನಡೆಸಲಿಲ್ಲ. ಈ ಪ್ರಕರಣವನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿಯವರ ಪೀಠವು 'ಚುನಾವಣೆಯನ್ನು ಆಗಸ್ಟ್‌ನಲ್ಲಿ ನಡೆಸಿ' ಎಂದು ತಿಳಿಸಿತು. ಆಯೋಗ ಆಗಲೂ ಚುನಾವಣೆ ನಡೆಸಲಿಲ್ಲ. ಅಕ್ಟೋಬರ್ 10ರಂದು ಹೈಕೋರ್ಟಿನ ಪೀಠವು, ರಾಜ್ಯ ಚುನಾವಣಾ ಆಯೋಗದ ಮುಖ್ಯಸ್ಥರಿಗೆ ಸಮನ್ಸ್ ಕಳಿಸಿತು. ಅವರ ಎದುರಿನಲ್ಲೇ ವಿಚಾರಣೆ ನಡೆಸಿತು. 'ಆದಷ್ಟು ಬೇಗ ಚುನಾವಣೆ ನಡೆಸಲಾಗುವುದು' ಎಂದು ಮುಖ್ಯಸ್ಥರು ತಿಳಿಸಿದರು.

ಮತ್ತೆ ಈ ಪ್ರಕರಣ ಪೀಠದ ಮುಂದೆ ವಿಚಾರಣೆಗೆ ಬಂದಿದ್ದು 2018ರ ಮೇ 5ರಂದು. ಆಗ, 'ಕ್ಷೇತ್ರ ಪುನರ್ ವಿಂಗಡಣಾ ಕಾರ್ಯ ಕೊನೆಯ ಹಂತದಲ್ಲಿದೆ. ಕಾಲಾವಕಾಶ ಬೇಕು' ಎಂದು ರಾಜ್ಯ ಸರ್ಕಾರ

ಮನವಿ ಮಾಡಿಕೊಂಡಿತು. ಈ ಕುರಿತು ವಿಚಾರಣೆಯನ್ನು ಮುಂದೂಡಿದ ಪೀಠವು ಆಗಸ್ಟ್ 8ರಂದು ಮತ್ತೆ ಈ ವಿಷಯವನ್ನು ಕೈಗೆತ್ತಿಕೊಂಡು 'ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಲ್ಲಿ ಇರುವ ತೊಂದರೆಗಳೇನು ಎಂಬುದನ್ನು ವಿವರಿಸಿ' ಎಂದು ರಾಜ್ಯ ಸರ್ಕಾರದ ಇಬ್ಬರು ಕಾರ್ಯದರ್ಶಿಗಳನ್ನು ಸಮನ್ ಮಾಡಿತು. ಅಕ್ಟೋಬರ್ 27ರಂದು ರಾಜ್ಯ ಸರ್ಕಾರವು 'ಈ ವರ್ಷ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗುತ್ತಿಲ್ಲ' ಎಂದು ಪೀಠಕ್ಕೆ ತಿಳಿಸಿತು.

ಆ ಮಧ್ಯೆ ಸರ್ಕಾರವು ಕೆಲವೊಂದು ಸ್ಥಾನಗಳಿಗೆ ಪ್ರತ್ಯಕ್ಷ ಚುನಾವಣೆ ರದ್ದುಪಡಿಸಿ, ಪರೋಕ್ಷ ಚುನಾವಣೆ ನಡೆಸುವುದಕ್ಕೆ ಸೂಕ್ತವಾಗುವಂತೆ ಕಾನೂನಿಗೆ ತಿದ್ದುಪಡಿ ತಂದು, ಸುಗ್ರೀವಾಜ್ಞೆಯನ್ನು ಹೊರಡಿಸಿತು.

ಜೊತೆಗೆ, ಇಂಡಿಯಾ ಕುಡಿಯರಸು ಕಚ್ಚಿ ಪಕ್ಷದ ಸಿ.ಕೆ.ತಮಿಳರಸನ್ ಅವರು, 'ಉಪಾಧ್ಯಕ್ಷ ಸ್ಥಾನಗಳಲ್ಲೂ ಮೀಸಲಾತಿ ಅಳವಡಿಸಬೇಕು ಮತ್ತು ರಾಜ್ಯದಲ್ಲಿನ ಪ.ಜಾತಿ/ಪ.ಪಂಗಡ ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಬೇಕು' ಎಂದು ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ, 'ಇದು ಇತ್ಯರ್ಥವಾದ ಮೇಲೆಯೇ ಚುನಾವಣೆ ನಡೆಸಬೇಕು' ಎಂದು ಮನವಿಯನ್ನು ಮಾಡಿಕೊಂಡರು.

2019ರ ಜನವರಿ 11ರಂದು ಹೈಕೋರ್ಟಿಗೆ ಮನವಿ ಸಲ್ಲಿಸಿದ ಡಿಎಂಕೆ, 'ರಾಜಕೀಯ ಕಾರಣದಿಂದಾಗಿ ಸರ್ಕಾರ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುತ್ತಿಲ್ಲ; ಅದಕ್ಕೆ ಸೋಲಿನ ಭೀತಿ ಇದೆ' ಎಂದು ಅರ್ಜಿ ಸಲ್ಲಿಸಿ, 'ಕೂಡಲೇ ಚುನಾವಣೆ ನಡೆಸುವಂತೆ ನಿರ್ದೇಶನ ನೀಡಿ' ಎಂದು ಕೋರಿದರು. ಇದನ್ನು ವಿಚಾರಣೆ ಮಾಡಿದ ಪೀಠವು 'ಮೇ 31ರೊಳಗೆ ಚುನಾವಣೆ ಎಂದು ಆಯೋಗಕ್ಕೆ ನಿರ್ದೇಶನ ನೀಡಿತು. ಒಂದು ಕಡೆ, ಆಯೋಗವು ಮೇ 11ರಿಂದ ಚುನಾವಣಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಪ್ರಾರಂಭಿಸಿತು; ಚುನಾವಣಾ ದಿನಾಂಕ ನಿಗದಿಗೊಳ್ಳಲಿಲ್ಲ. ಇನ್ನೊಂದು ಕಡೆ, 'ಚುನಾವಣೆಗೆ ಸಜ್ಜಾಗಿ' ಎಂದು ಅಣ್ಣಾಡಿಎಂಕೆ, ಜೂನ್ 13ರಂದು ತನ್ನ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ ಕರೆ ನೀಡಿತು. ಚುನಾವಣಾ ದಿನಾಂಕ ಘೋಷಣೆ ಆಗಲಿಲ್ಲ.

ಈ ಕುರಿತು ಡಿಎಂಕೆ ನವೆಂಬರ್ 28ರಂದು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿತು. 2019 ಮುಗಿಯುವ ಒಳಗೆ ಚುನಾವಣೆ ನಡೆಸುವಂತೆ ತಮಿಳುನಾಡು ಸರ್ಕಾರಕ್ಕೆ ಮತ್ತು ತಮಿಳುನಾಡು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಮನವಿ ಮಾಡಿಕೊಂಡಿತು. ಇದಕ್ಕೆ ಸ್ಪಂದಿಸಿದ ಸುಪ್ರೀಂ ಕೋರ್ಟು ಈ ಬಗ್ಗೆ ಆದೇಶ ಹೊರಡಿಸಿತು.

ಸುಪ್ರೀಂ ಕೋರ್ಟಿನ ಆದೇಶದಂತೆ ತಮಿಳುನಾಡಿನಲ್ಲಿ ಚುನಾವಣೆ ಪ್ರಕ್ರಿಯೆ ಪಾರಂಭವಾಯಿತು. ಜಿಲ್ಲಾ ಪಂಚಾಯತಿಗಳಿಗೆ ಮತ್ತು ಪಂಚಾಯತ್ ಯೂನಿಯನ್(ಬ್ಲಾಕ್ ಪಂಚಾಯತಿ)ಗಳಿಗೆ ಚುನಾವಣಾ ದಿನಾಂಕಗಳು ನಿರ್ಧಾರವಾದವು. ಚುನಾವಣೆಗಳು ಎರಡು ಹಂತಗಳಲ್ಲಿ ನಡೆಯುವವು ಎಂದು ತಿಳಿಸಿ, ಆ ದಿನಾಂಕಗಳನ್ನು ಸುಪ್ರೀಂ ಕೋರ್ಟಿನ ಆದೇಶದಂತೆ ತಮಿಳುನಾಡಿನಲ್ಲಿ ಚುನಾವಣೆ ಪ್ರಕ್ರಿಯೆ ಪಾರಂಭವಾಯಿತು. ಡಿಸೆಂಬರ್ 27 ಮತ್ತು 30 ಎಂದು ಪ್ರಕಟಿಸಲಾಯಿತು.

ಗ್ರಾಮೀಣ ಚುನಾವಣೆ ಸುಪ್ರೀಂ ಕೋರ್ಟಿನ ಆದೇಶ ದಂತೆ ತಮಿಳುನಾಡಿನಲ್ಲಿ ಚುನಾವಣೆ ಪ್ರಕ್ರಿಯೆ ಪಾರಂಭ ವಾಯಿತು. ಡಿಸೆಂಬರ್ 27 ಮತ್ತು 30 ಎಂದು ಚುನಾವಣಾ ದಿನಾಂಕಗಳು ನಿರ್ಧಾರವಾದವು. ಜಿಲ್ಲಾ ಪಂಚಾಯತಿ ಸದಸ್ಯರ, ಪಂಚಾಯತ್ ಯೂನಿಯನ್ ವಾರ್ಡ್ ಸದಸ್ಯರ, ಗ್ರಾಮ ಪಂಚಾಯತ್ ಅಧ್ಯಕ್ಷರ ಮತ್ತು ಗ್ರಾಮ ಪಂಚಾಯತ್ ವಾರ್ಡ್ ಸದಸ್ಯರ ಒಟ್ಟು 91,975 ಸ್ಥಾನಗಳಿಗೆ ಚುನಾವಣೆ ನಡೆಯಿತು. 2.31 ಲಕ್ಷ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಮೊದಲ ಹಂತದಲ್ಲಿ 76% ಮತದಾನ ನಡೆದರೆ, ಎರಡನೇ ಹಂತದಲ್ಲಿ ಅದು 78%ಕ್ಕೆ ಏರಿತ್ತು. ಹೊಸದಾಗಿ ರಚಿಸಲಾಗಿದ್ದ ಜಿಲ್ಲೆಗಳಿಗೆ ಚುನಾವಣೆ ನಡೆಸದಂತೆ ಸುಪ್ರೀಂ ಕೋರ್ಟು ನಿರ್ದೇಶನ ನೀಡಿದ್ದರಿಂದ ಅಲ್ಲಿ ಚುನಾವಣೆ ನಡೆಯಲಿಲ್ಲ.

| ಪಕ್ಷಗಳು | ಯೂನಿಯನ್ ವಾರ್ಡ್ ಸದಸ್ಯರು | ಜಿಲ್ಲಾ ಪಂಚಾಯತಿ ವಾರ್ಡ್ ಸದಸ್ಯರು |
|---|---|---|
| DMK | 2178 | 248 |
| Congress | 131 | 1 5 |
| CPI | 72 | 07 |
| CPI(M) | 43 | 02 |
| AIADMK | 1625 | 217 |
| PMK | 274 | 16 |
| DMDK | 147 | 03 |
| BJP | 134 | 07 |
| Others | 558 | 02 |
| ಒಟ್ಟು | 5094 | 515 |

ಜಿಲ್ಲಾ ಪಂಚಾಯತಿ ವಾರ್ಡ್ ಸದಸ್ಯರುಗಳ ಸಂಖ್ಯೆ ಒಟ್ಟು ಇದ್ದುದು 515. ಇವುಗಳಲ್ಲಿ ಡಿಎಂಕೆ ನೇತೃತ್ವದ ಒಕ್ಕೂಟವು (ಇದಲ್ಲಿ ಕಾಂಗ್ರೆಸ್, ಸಿಪಿಐ, ಸಿಪಿಐ(ಎಂ) ಮತ್ತು ಇತರ ಪಕ್ಷಗಳು ಇದ್ದವು) 41%ರಷ್ಟು ಮತಗಳನ್ನು ಗಳಿಸಿ, 235 ಸ್ಥಾನಗಳನ್ನು ಗೆದ್ದುಕೊಂಡಿತು. ಅಣ್ಣಾಡಿಎಂಕೆ ನೇತೃತ್ವದ ಒಕ್ಕೂಟವು (ಇದರಲ್ಲಿ ಬಿಜೆಪಿ, ಡಿಎಂಡಿಕೆ, ಪಿಎಂಕೆ ಮತ್ತು ಇತರ ಪಕ್ಷಗಳು ಇದ್ದವು) 37%ರಷ್ಟು ಮತಗಳನ್ನು ಗಳಿಸಿ, 195 ಸ್ಥಾನಗಳನ್ನು ವಶಪಡಿಸಿಕೊಂಡಿತು. ಹಾಗೆಯೆ, ಪಂಚಾಯತ್ ಯೂನಿಯನ್ ವಾರ್ಡ್ ಸದಸ್ಯ ಸ್ಥಾನಗಳು ಒಟ್ಟು ಇದ್ದುದು 5,090. ಇದರಲ್ಲಿ ಡಿಎಂಕೆ ನೇತೃತ್ವದ ಒಕ್ಕೂಟವು 2,316 ಸ್ಥಾನಗಳನ್ನು ಗೆದ್ದರೆ, ಅಣ್ಣಾಡಿಎಂಕೆ ನೇತೃತ್ವದ ಒಕ್ಕೂಟವು 1,847 ಸ್ಥಾನಗಳನ್ನು ಗೆದ್ದುಕೊಂಡಿತು. ಚುನಾವಣೆ ನಡೆದಿದ್ದು 27 ಜಿಲ್ಲೆಗಳಲ್ಲಿ. ಈ ಪೈಕಿ 14 ಜಿಲ್ಲಾ ಪಂಚಾಯತಿಗಳಲ್ಲಿ ಡಿಎಂಕೆ ನೇತೃತ್ವದ ಒಕ್ಕೂಟ ಬಹುಮತ ಗಳಿಸಿದರೆ, 13 ಜಿಲ್ಲಾ ಪಂಚಾಯತಿಗಳಲ್ಲಿ ಅಣ್ಣಾಡಿಎಂಕೆ ನೇತೃತ್ವದ ಒಕ್ಕೂಟ ಬಹುಮತ ಗಳಿಸಿತು.

ಒಟ್ಟು 515 ಜಿಲ್ಲಾ ಪಂಚಾಯತಿ ಸ್ಥಾನಗಳಲ್ಲಿ ಡಿಎಂಕೆ ನೇತೃತ್ವದ ಒಕ್ಕೂಟವು 47%ರಷ್ಟು ಮತಗಳಿಕೆ ಮಾಡಿ, 267 ಸ್ಥಾನಗಳಲ್ಲಿ ಜಯಭೇರಿ ಹೊಡೆಯಿತು. ಅಣ್ಣಾಡಿಎಂಕೆ ನೇತೃತ್ವದ ಒಕ್ಕೂಟವು 41.5%ರಷ್ಟು ಮತ ಗಳಿಸಿ, 240 ಸ್ಥಾನಗಳಿಗೆ ತೃಪ್ತಿಪಡಬೇಕಾಯಿತು.

ತಮಿಳುನಾಡು ಸೇರಿದಂತೆ ದೇಶದ ಎಲ್ಲಾ ರಾಜ್ಯಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು ಎಂದು ಎಲ್ಲಾ ಪ್ರಜಾಪ್ರಭುತ್ವವಾದಿಗಳು ಒತ್ತಾಯಿಸಬೇಕು.

■

ಇಂಥ ಲೇಖನಗಳನ್ನು ನೀವು ಇಷ್ಟಪಡುವಿರಾ?
ಹಾಗಾದರೆ ಲೇಖಕರನ್ನು ಸಂಪರ್ಕಿಸಿ.
ಅವರ ನಂಬರ್ 94491–02294